**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 167/2021**

**ಪ್ರಾಸಾ- 7 ಚಾಸಾ- 7**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರಾಜೇಗೌಡ |
| ತಂದೆಯ ಹೆಸರುಃ | : | ದೊಡ್ಡೇಗೌಡ |
| ವಯಸ್ಸುಃ | : | 42 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಮಡಬಲು ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:15-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ ನಿಪಿ-4ರಲ್ಲಿರುವ ರುಜು ನನ್ನದೆ. ಅದನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಈಗ್ಗೆ 2ವರೆ -3 ವರ್ಷಗಳ ಹಿಂದೆ ನಾನು ನನ್ನ ಜಮೀನಿನ ಕಡೆಗೆ ಪಂಚಾಯಿತಿ ಕಛೇರಿ ಬಳಿ ಹೋಗುತ್ತಿರುವಾಗ ಹಾಕಿಕೊಂಡಿರುತ್ತಾರೆ. ಘಟನಾ ಸ್ಥಳದಲ್ಲಿ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಎಂ.ಒ.3ನ್ನು ನಾನು ಈ ಹಿಂದೆ ನೋಡಿಲ್ಲ. ನನ್ನ ಸಮಕ್ಷಮ ಅದನ್ನು ವಶಪಡಿಸಿಕೊಂಡಿಲ್ಲ. ನಿಪಿ-4ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿನಾಂಕ 2-9-2020ರಂದು ನನ್ನನ್ನು ಪೊಲೀಸರು ಮಡಬಲು ಪಂಚಾಯ್ತಿಯ ಗಣಕಯಂತ್ರ ಕೊಠಡಿಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಚಾಸಾ-2 ಬಸವರಾಜುರವರು ಕೂಡ ಹಾಜರಿದ್ದು ಅವರು ಈ ಪ್ರಕರಣದ ಕೃತ್ಯಸ್ಥಳ ಇದೇ ಎಂದು ತೋರಿಸಿದರು ಮತ್ತು ಅಲ್ಲಿ ಜಖಂ ಆದ ಒಂದು ಕಂಪ್ಯೂಟರ್ ಮಾನೀಟರ್ ನ್ನು ಹಾಜರುಪಡಿಸಿದರು ಅದನ್ನು ಪೊಲೀಸರು ನನ್ನ ಸಮಕ್ಷಮ ಎಂ.ಒ3 ರಂತೆ ವಶಪಡಿಸಿಕೊಂಡು ನಿಪಿ-4ರಂತೆ ಮಹಜರು ಮಾಡಿ ಸಹಿ ಪಡೆದರೆಂದರೆ ಸರಿಯಲ್ಲ. ಮಡಬಲು ಗ್ರಾ.ಪಂ.ಯ ಗಣಕಯಂತ್ರ ಕೊಠಡಿಯಲ್ಲಿ ಸಹಿ ಮಾಡಿದ್ದರೂ ಕೂಡ ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**